

ಸ್ನೇಹಿತನಾದ ಡಾ. ನವೀನ್‌ಕುಮಾರ್ ಕೆ. ಎಸ್. ಅವರ ತಮ್ಮ ಚೊಚ್ಚಲ ಸಂಪಾದನಾ ಕೃತಿಯಾದ 'ಪುನರ್ಲೇಖನ' ಕೃತಿಯನ್ನು ಹೊರತರುತ್ತಿರುವುದು ಅತ್ಯಂತ ಸಂತಸದಾಯಕ ವಿಚಾರವಾಗಿದೆ. ಮೂವತ್ತು ಲೇಖನಗಳನ್ನು ಒಳಗೊಂಡ ಮೌಲಿಕ ಕೃತಿ ಇದಾಗಿದೆ. ವಿವಿಧ ಸ್ತರಗಳ, ವಿವಿಧ ಆಯಾಮದ ಹಿನ್ನೆಲೆಯಲ್ಲಿ ಸಂಗ್ರಹಿಸಿದ ಅತ್ಯಮೂಲ್ಯ ಲೇಖನಗಳ ಸಂಗ್ರಹ ಮೂಲೆಯಾಗಿದೆ. ಮುಂದಿನ ಸಂಶೋಧನಾ ವಿದ್ಯಾರ್ಥಿಗಳಿಗೆ, ಓದುಗರಿಗೆ ಇದೊಂದು ಪರಾಮರ್ಶನ ಗ್ರಂಥವಾಗುವುದರಲ್ಲಿ ಅತಿಶೋಕ್ತಿಯಾಗಲಾರದು.

ಡಾ. ನವೀನ್‌ಕುಮಾರ್ ಕೆ.ಎಸ್. ಅವರು ಮೂಲತಃ ಹರಿಹರ ತಾಲ್ಲೂಕಿನ, ಸಾರಥಿ ಗ್ರಾಮದವರು. ಇವರು ಪ್ರಾಥಮಿಕ ಶಿಕ್ಷಣವನ್ನು ಅಲ್ಲಿಯೇ ಪಡೆದು ಮುಂದೆ ಬಿ.ಎಡ್, ಎಂ.ಎ, ಎಂ.ಎಡ್, ಪದವಿಯನ್ನು ಪಡೆದಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಡಾ. ಕೆ.ಸಿ. ಸುರೇಶ್ ಅವರ ಮಾರ್ಗದರ್ಶನದಲ್ಲಿ "ಹರಿಹರ ತಾಲ್ಲೂಕಿನ ಗ್ರಾಮ ದೈವಗಳ ಸಾಂಸ್ಕೃತಿಕ ಅಧ್ಯಯನ"ಎಂಬ ವಿಷಯದಲ್ಲಿ ಸಂಶೋಧನೆಯನ್ನು ಮಾಡಿ ಪಿ.ಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಇವರು ಎ.ವಿ.ಎಸ್. ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇಂತಹ ಸಂಧರ್ಭದಲ್ಲಿ 'ಪುನರ್ಲೇಖನ' ಕೃತಿಯನ್ನು ಹೊರತರುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

– ಡಾ. ಯಲ್ಲಪ್ಪ ಸಣ್ಣೇಲಪ್ಪರ


ISBN : 978-93-5526-917-1

978-93-5526-917-1

ಪುನರ್ಲೇಖನ   ಸಂ : ಡಾ. ನವೀನ್‌ಕುಮಾರ್ ಕೆ.ಎಸ್.

# ಪುನರ್ಲೇಖನ

ಸಂ : ಡಾ. ನವೀನ್‌ಕುಮಾರ್ ಕೆ.ಎಸ್.



| | | |
|---|---|---|
| 1 | Name of the Book | PUNARLEKHANA |
| 2 | Editor | **Dr. Naveen Kumar K.S** |
| 3 | Publisher | Nakhshatra Prakashan, Hirihar |
| 4 | Year of Publishing | 2021-22 |
| 5 | ISBN Number | 978-93-8453-498-1 |
| 6 | Chapter Title | Myasabedara Samskruti Mathu Mahile |
| 7 | Chapter Writer | Prof. B. Revanna ISBN 978-93-8453-498-1 |
| | HEI: SJM College of Arts, Science and Commerce | |
| 8 | Page No, | 114-117 |

PRINCIPAL
S J M Arts Science &
Commerce College
Hlk. Road, CHITRADURGA.

S.J.M. COLLEGE
CHITRADURGA
Chandravalli,

(೧೫) ಮ್ಯಾಸಬೇಡರ ಸಂಸ್ಕೃತಿ ಮತ್ತು ಮಹಿಳೆ

– ಡಾ. ಬಿ. ರೇವಣ್ಣ
ಕನ್ನಡ ಸಹಾಯಕ ಪ್ರಾಧ್ಯಾಪಕರು, ಎಸ್.ಜೆ.ಎಮ್. ಕಾಲೇಜು,
ಚಂದವಳ್ಳಿ, ಚಿತ್ರದುರ್ಗ. ಮೊ. ೯೮೮೬೯೭೫೪೩೫

ಮಾನವ ಸಮಾಜದೊಳಗೆ ಹೆಣ್ಣು–ಗಂಡೆಂಬ ಅಸಮಾನತೆ ಅತ್ಯಂತ ಸಹಜವೆಂಬಂತಾಗಿದೆ. ಹಾಗೂ ಸರ್ವ ವ್ಯಾಪಕವಾಗಿದೆ. ಈ ಸಮಸ್ಯೆ ಎಲ್ಲಿ ಇಲ್ಲ ಎನ್ನುವುದಕ್ಕಿಂತ ಎಲ್ಲೆಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿದೆ ಎಂಬುದನ್ನು ಶೋಧಿಸುವುದು ಉಪಯುಕ್ತ. ವಿದ್ವಾಂಸರು ಊಹಿಸಿರುವಂತೆ ಮನುಷ್ಯ ಪ್ರಕೃತಿಗೆ ಎಷ್ಟು ಹತ್ತಿರವಾಗಿ ಬದಕುತ್ತಾನೆ ಎಂಬುದರ ಆಧಾರದ ಮೇಲೆ ಲಿಂಗ ಬೇಧ ನೀತಿಯನ್ನು ಗುರುತಿಸಬಹುದು. ಅಂದರೆ ಪ್ರಕೃತಿಗೆ ಹತ್ತಿರವಾಗಿ ಬದುಕುವ ಸಮಾಜಗಳಲ್ಲಿ ಹೆಣ್ಣು–ಗಂಡಿನ ನಡುವಿನ ಬೇಧ ಕಡಿಮೆಯಾಗಿದೆ. ಪ್ರಕೃತಿಯಿಂದ ದೂರವಾದಷ್ಟು ಈ ಬೇಧವೂ ಕೂಡ ಹೆಚ್ಚುತ್ತಾ ಹೋಗಿದೆ. ಇದನ್ನು ಬುಡಕಟ್ಟು, ಗ್ರಾಮೀಣ, ನಗರ ಸಮುದಾಯಗಳ ಸಮಾಜಗಳಲ್ಲಿನ ಲಿಂಗತತ್ವಗಳನ್ನು ತೌಲನಿಕವಾದ ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ ತಿಳಿಯಬಹುದಾಗಿದೆ. ಇಂಥ ತಿಳುವಳಿಕೆಯ ಹಿನ್ನೆಲೆಯಲ್ಲಿ ಕರ್ನಾಟಕದ ಚಿತ್ರದುರ್ಗ, ಬಳ್ಳಾರಿ, ದಾವಣಗೆರೆ ಜಿಲ್ಲೆಗಳಲ್ಲಿ ನೆಲೆನಿಂತಿರುವ ಮ್ಯಾಸಬೇಡ ಸಮುದಾಯದೊಳಗೆ ಮಹಿಳೆಯ ಸ್ಥಾನ–ಮಾನಗಳನ್ನು ಪರಾಮರ್ಶಿಸುವ ಪ್ರಧಾನ ಉದ್ದೇಶ ಈ ಲೇಖನದ್ದಾಗಿದೆ.

"ಮ್ಯಾಸಬೇಡರು" ಕರ್ನಾಟಕದ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಕೂಡಿದ ವರ್ಣ ರಂಜಿತ ಬುಡಕಟ್ಟುಗಳಲ್ಲಿ ಒಂದಾಗಿದೆ. ಈ ಸಮುದಾಯ ಮೂಲತಃ ಬೇಟೆಗಾರ ಸಮುದಾಯವಾಗಿದ್ದು, ಕಾಲಾನಂತರ ಪಶುಪಾಲನೆ ಮತ್ತು ಕೃಷಿಯನ್ನು ಆರಂಭಿಸಿದೆ. ಈಗ ಈ ಮೂರು ವೃತ್ತಿಗಳನ್ನು ಅವಲಂಭಿಸಿ ಬದುಕುತ್ತಿದೆ. ಅರಣ್ಯ ಮ್ಯಾಸಬೇಡ ಸಮುದಾಯಕ್ಕೆ ಮೂಲಧಾರವಾಗಿದೆ. ಹಿಂದಿನಿಂದ ಇಂದಿನವರೆಗೂ ಅರಣ್ಯದ ಜೊತೆ ತನ್ನ ಬದುಕನ್ನು ಬದುಕುತ್ತಾ ಬಂದಿದೆ. ಇಂಥ ಸಮುದಾಯದೊಳಗೆ ಮಹಿಳೆಯ ಸ್ಥಾನವೇನು ಎಂಬುದಾಗಿ ಅಧ್ಯಯನ ಮಾಡುವುದು ಅತ್ಯಂತ ಕುತೂಹಲಕರ. ಆದರೆ ಇಲ್ಲಿಯವರೆಗೆ ಮ್ಯಾಸಬೇಡ ಸಮುದಾಯದ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ ಆ ಸಮುದಾಯದ ಒಳಗಿನ ಮಹಿಳೆಯನ್ನು ಕೇಂದ್ರೀಕರಿಸಿಕೊಳ್ಳದೇ ಚೆಲ್ಲಾಪಿಲ್ಲಿ ಚಿಂತನೆಗಳಾಗಿವೆ. ಹಾಗಾಗಿ ಈಗಲಾದರೂ ಮ್ಯಾಸಬೇಡರ ಮಹಿಳೆಯನ್ನು ಕೇಂದ್ರೀಕರಿಸಿಕೊಂಡ ಗಂಭೀರ ಅಧ್ಯಯನಗಳು ನಡೆಯಬೇಕಿದೆ. ಇಂಥ ಆಲೋಚನೆಯ ಅಗತ್ಯತೆಯ ಹಿನ್ನೆಲೆಯಲ್ಲಿ ಒಂದು ಚಿಕ್ಕ ಪ್ರಯತ್ನ ಇದಾಗಿದೆ.

ಈ ಲೇಖನಕ್ಕೆ ಮಾಹಿತಿಗಳನ್ನು ಈಗಾಗಲೇ ಪ್ರಕಟಗೊಂಡಿರುವ ಬರಹಗಳು ಹಾಗೂ ಹೊಸದಾಗಿ ಸ್ವಲ್ಪ ಪ್ರಮಾಣದ ಕ್ಷೇತ್ರ ಕಾರ್ಯವನ್ನು ಮಾಡಿದ್ದರಿಂದ ದೊರೆತ ಪ್ರಾಥಮಿಕ ಮೂಲಗಳಿಂದ ಸಂಗ್ರಹಿಸಲಾಗಿದೆ. ಸಂಗ್ರಹಿತ ಮಾಹಿತಿಯನ್ನು ಲಿಂಗ ಸಮಾನತೆಯನ್ನು ಬಯಸುವ ತತ್ವ ಸಿದ್ಧಾಂತಗಳ ಬೆಳಕಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಮ್ಯಾಸ ಬೇಡರ ಸಂಸ್ಕೃತಿಯಲ್ಲಿ ಮಹಿಳೆ : ಮ್ಯಾಸಬೇಡರ ಸಂಸ್ಕೃತಿಯಲ್ಲಿ ಮಹಿಳೆ ಎನ್ನುವಾಗ 'ಮ್ಯಾಸಬೇಡರ ಸಂಸ್ಕೃತಿ' ಎಂಬ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿಕೊಳ್ಳುವುದು ಸೂಕ್ತ. ಸಂಸ್ಕೃತಿ ಎಂಬ ಪದ ಒಂದು ಪರಿಕಲ್ಪನಾತ್ಮಕ ಚೌಕಟ್ಟನ್ನು ಹೊಂದಿ ವೈವಿದ್ಯಮಯ ಅರ್ಥಗಳನ್ನು ಪಡೆದುಕೊಂಡಿರುವುದು ಅಂಥ ಒಂದು ಸ್ಪಷ್ಟೀಕರಣವನ್ನು ಬಯಸುತ್ತದೆ. ಈ ಕಾರಣದಿಂದಾಗಿ ಮ್ಯಾಸ ಬೇಡರ ಸಂಸ್ಕೃತಿ ಎಂದರೆ ಮ್ಯಾಸ ಬೇಡ ಸಮುದಾಯದ ಕುಟುಂಬ, ದೈವ ನಂಬಿಕೆ, ಸಂಪ್ರದಾಯ, ಆಚರಣೆ ಮೊದಲಾದವುಗಳ ಮೊತ್ತ ಎನ್ನುವ ಅರ್ಥಕ್ಕೆ ಸೀಮಿತ ಮಾಡಿಕೊಳ್ಳಲಾಗಿದೆ. ಇಂಥ ತಿಳುವಳಿಕೆಯ ಹಿನ್ನೆಲೆಯಲ್ಲಿ ಮ್ಯಾಸಬೇಡರ ಸಮುದಾಯದೊಳಗೆ ಮಹಿಳೆಯ ಸ್ಥಾನ–ಮಾನಗಳ ಬಗ್ಗೆ ತಿಳಿಯಬಹುದಾಗಿದೆ.

- **ಕುಟುಂಬದಲ್ಲಿ :** ಮ್ಯಾಸ ಬೇಡರಲ್ಲಿ ಕುಟುಂಬಕ್ಕೆ ಅತೀ ಹೆಚ್ಚು ಪ್ರಮುಖ್ಯತೆ ಇದ್ದು ಅಂಥ ಕುಟುಂಬದ ಮೂಲಾಧಾರವೇ ಮಹಿಳೆ ಎಂಬುದನ್ನು ಇಲ್ಲಿ ಗಮನಿಸಬೇಕು. ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳ ನಡುವೆಯೂ ತನ್ನದೇ ಆದ ಅಸ್ತಿತ್ವವನ್ನು ಸ್ಥಾಪಿಸುವಲ್ಲಿ ಮ್ಯಾಸಬೇಡರ ಮಹಿಳೆ ಯಶಸ್ವಿಯಾಗಿರುವುದು ಕಂಡುಬರುತ್ತದೆ. ಇದಕ್ಕೆ ಪ್ರಮುಖ ಕಾರಣ ಆಕೆ ಕುಟುಂಬ ನಿರ್ವಹಣೆಗೆ ಹಾಗೂ ಜೀವನ ನಿರ್ವಹಣೆಗೆ ಅಗತ್ಯವಾಗಿರುವ ದುಡಿಮೆಯಲ್ಲಿ ನಿರತವಾಗಿರುವುದೇ ಆಗಿದೆ. ಈ ಸಮುದಾಯದ ದುಡಿಮೆಯ ಕ್ರಿಯೆಯಲ್ಲಿ ಹೆಣ್ಣು–ಗಂಡಿಗೆ ಯಾವುದೇ ಬೇಧಗಳಿಲ್ಲ. ಹಾಗಾಗಿ ಈ ಸಮುದಾಯದೊಳಗೆ ಮದುವೆ ಸಂದರ್ಭಗಳಲ್ಲಿ ಹೆಣ್ಣಿನ ಸೌಂದರ್ಯಕ್ಕಿಂತ ಆಕೆಯ ದೈಹಿಕ ಸಮರ್ಥತೆಯ ಬಗ್ಗೆ ಹೆಚ್ಚಿನ ಕಾಳಜಿ ಇರುತ್ತದೆ.
- **ಧಾರ್ಮಿಕ ಆಚರಣೆಗಳಲ್ಲಿ :** ಮ್ಯಾಸ ಬೇಡರ ಸಂಸ್ಕೃತಿಯ ಒಳಗಿನ ಆಚರಣೆಗಳ ಲೋಕ ಬಹಳ ವಿಸ್ತಾರವಾದುದು, ವೈವಿಧ್ಯಮಯವಾದುದು ಆಗಿದೆ. ಇಂಥ ಆಚರಣಾ ಲೋಕದೊಳಗೆ ಮಹಿಳೆಯ ಪಾತ್ರವೂ ಕೂಡ ವೈವಿಧ್ಯಮಯವಾಗಿದೆ. ಅನೇಕ ಸಮುದಾಯಗಳ ಧಾರ್ಮಿಕ ವಲಯದೊಳಗೆ ಮಹಿಳೆಯರ ಪ್ರವೇಶ ನಿಷಿದ್ಧವಾಗಿರುವ ಈ ಸಮಾಜದಲ್ಲಿ ಪ್ರಸ್ತುತ ಸಮುದಾಯದ ಆಚರಣೆಗಳಲ್ಲಿ ಪುರುಷನ್ನಷ್ಟೇ ಸಮಾನವಾಗಿ ಅಲ್ಲದಿದ್ದರೂ ಸಮಾಧಾನಕರ ರೀತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಗುರುತಿಸಬಹುದಾಗಿದೆ. ಉದಾ: ದೇವರ ಪೂಜಾ ಪ್ರಕ್ರಿಯೆಯಲ್ಲಿ ಸೋಬಾನೆ